Golden Resrach Thoughts
Vol -1 , ISSUE –VII, Jan - 2012
ISSN No-2031-5063
Available online at www.grt.net

ORIGINAL ARTICLE

# ದೇವದುರ್ಗ ತಾಲ್ಲೂಕಿನಮಠ ಮಾನ್ಯಗಳ ಒಂದು ಸಾಂಸ್ಕೃತಿಕ ಅವಲೋಕನ

**ಶಿವಗಂಗಾ U. ಬಿಲಗುಂದಿ**

ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**

ಭಾರತ ದೇಶದಲ್ಲಿ ಧರ್ಮಕ್ಕೆ ಇರುವಷ್ಟು ಪ್ರಾಮುಖ್ಯತೆ ಬೇರೆ ಯಾವ ದೇಶದಲ್ಲಿಯೂ ಇರಲಿಕ್ಕಿಲ್ಲ. ಪುರಾತನ ಹಿಂದೂ ಧರ್ಮದಲ್ಲಿ ಹಲವು ಶಾಖೆಗಳು ಇದ್ದು ಪ್ರತಿಯೊಂದು ಶಾಖೆಗೂ ಧರ್ಮಾಧಿಕಾರಿ ಅಥವಾ ಗುರುಗಳು ಇದ್ದಾರೆ. ಎಲ್ಲಾ ಧರ್ಮಗಳು ಕೇಂದ್ರಗಳನ್ನು ಸ್ಥಾಪಿಸಿಕೊಂಡು ಧರ್ಮ ಪ್ರಚಾರವನ್ನು ಮಾಡುತ್ತಾ ಬಂದಿವೆ. ಧರ್ಮ ಪ್ರಚಾರಕರು ಅಥವಾ ಸನ್ಯಾಸಿಗಳು ನೆಲೆನಿಂತ ಕೇಂದ್ರಗಳು ಮಠಗಳಾಗಿ ಹೆಸರು ಪಡೆದುಕೊಂಡಿವೆ.

ಧಾರ್ಮಿಕ ಸಾಂಸ್ಕೃತಿಕ ಸಂಸ್ಥೆಗಳಾದ ಮಠ ಮಾನ್ಯಗಳಿಗೆ ಸಮಾಜಕ್ಕೂ ಅವಿನೋಭಾವ ಸಂಬಂಧವಿದೆ. ಒಂದು ಕಾಲಕ್ಕೆ ಸಮಾಜದ ಬದುಕನ್ನು ನಿಯಂತ್ರಿಸಬಲ್ಲ ರೂಪಿಸಬಲ್ಲ ಮಹತ್ತರವಾದ ಸಂಸ್ಥೆಗಳಾಗಿ ಮಠಮಾನ್ಯಗಳು ಬೆಳೆದು ನಿಂತಿದ್ದವು. ಜನ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಶ್ರಮಿಸಿವೆ.

ಸಂಕ್ಷಿಪ್ತವಾಗಿ ಮಠಗಳ ಅರ್ಥವನ್ನು ಹೇಳುವುದಾದರೆ ಮಠ ಎಂದರೆ ಸಂನ್ಯಾಸಿಗಳೂ ವಾಸಿಸುವ ಸ್ಥಳ ಎಂದು ಅಮರಕೋಶದಲ್ಲಿ 'ಛಾತ್ರಾದಿನಿಲಯ' ಎಂದು ಅರ್ಥವಿದ್ದು. ಇಲ್ಲಿ ಗುರುಗಳು ಶಿಷ್ಯರು, ಸನ್ಯಾಸಿಗಳು ವಾಸಿಸುವ ಯೋಗ್ಯ ಸ್ಥಳವೆಂದು ಉಲ್ಲೇಖವಿದೆ. ವೀರಶೈವ ಮಠಗಳ ಮಟ್ಟಿಗೆ ಹೇಳುವುದಾದರೆ ಧಾರ್ಮಿಕ ಹಿನ್ನೆಲೆಯಲ್ಲಿ ಆತ್ಮೋದ್ಧಾರ ಮತ್ತು ಸಮಾಜೋದ್ಧಾರ ಕೆಲಸವನ್ನುನಡೆಸುವ ಕೇಂಧ್ರಗಳೇ ಮಠಗಳಾಗಿವೆ.

ಮಠ ಎಂದರೆ ಮುನಿಗಳು ವಾಸವಾಗಿರುವ ಸ್ಥಾನವೆಂದು ಕರೆಯುತ್ತಾರೆ. ಬ್ರಹ್ಮಚಾರಿಗಳು ಸದಾ ವಾಸವಾಗಿರುತ್ತಿದ್ದರು. "ವೇದಕಾಲದಲ್ಲಿ ರಚಿತವಾಗಿರುವ ಗುರುಕುಲಗಳಿಗೆ ಮಠಗಳೆಂದು ಕರೆಯುತ್ತಾರೆ. ಅಂತಹ ಗುರುಕುಲಗಳಲ್ಲಿ ಧಾರ್ಮಿಕ ಚಿಂತನೆ ಸದ್ಭಾಗೋಷ್ಠಿ ಮತ್ತು ಧರ್ಮ ನಡಾವಳಿಗಳನ್ನು ಗುರು ಶಿಷ್ಯರು ಸಮಾಲೋಚನೆ ಮಾಡುತ್ತಿದ್ದರು".[೨]

ಒಟ್ಟಾರೆ ಮಠಗಳು ಧರ್ಮವನ್ನು ಉಳಿಸಿ ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ದೇವದುರ್ಗ ತಾಲ್ಲೂಕಿನ ಮಠಮಾನ್ಯ ಒಂದು ಸಾಂಸ್ಕೃತಿಯ ಬಗ್ಗೆ ಗಮನದಲ್ಲಿರಿಸಿಕೊಂಡು ಈ ಲೇಖನ ಸಿದ್ಧಗೊಂಡಿದೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು ಐತಿಹಾಸಿಕವಾಗಿ ಪ್ರಸಿದ್ಧಿ ಪಡೆದಿದೆ. ಈ ತಾಲ್ಲೂಕು ಇತ್ತೀಚೆಗೆ ಕೃಷ್ಣ ನದಿ ನೀರಿನ ಹೊಸ ಯೋಜನೆಯಿಂದ ನೀರಾವರಿಯನ್ನು ಕಂಡು ಆರ್ಥಿಕವಾಗಿ ಸಧೃಡಗೊಳ್ಳತೊಡಗಿದೆ. ಈ ತಾಲ್ಲೂಕಿನಲ್ಲಿ ಪ್ರಸ್ತುತ ಏಳು ಮಠಗಳು ಅಸ್ತಿತ್ವದಲ್ಲಿವೆ.

**ಗಬ್ಬೂರು**

ದೇವದುರ್ಗ ತಾಲ್ಲೂಕಿನ ಗಬ್ಬೂರು ಗ್ರಾಮವು ತಾಲ್ಲೂಕು ಕೇಂದ್ರ ಸ್ಥಳದಿಂದ ೮ ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ವೀರಶೈವ ಧರ್ಮದ ಪ್ರಚಾರ ಕೇಂದ್ರವಾಗಿ ರೂಪುಗೊಂಡಿದೆ. ಪುರಾತನ ಕಾಲದಲ್ಲಿ ಶ್ರೀ ಬೂದಿಬಸವೇಶ್ವರ ಮಠ ಹಾಗೂ ಶ್ರೀ ಸಾವಿರ ದೇವರ ಮಠಗಳು ಸ್ಥಾಪನೆಯಾಗಿವೆ. ಈ ಮಠಗಳ ಸ್ಥಾಪನೆಯಿಂದ ಈ ಗ್ರಾಮದಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿದ್ದು, ಸಂಸ್ಕಾರವಂತ ಸಮಾಜ ರೂಪುಗೊಂಡಿದೆ.

**ಬೂದಿಬಸವೇಶ್ವರ ಮಠ**

ಶ್ರೀ ಬೂದಿಬಸವೇಶ್ವರ ಮಠವು ಗಬ್ಬೂರು ಗ್ರಾಮದ ಪಶ್ಚಿಮದ ಹೊರಭಾಗದಲ್ಲಿ ಚಿಕ್ಕಗುಡ್ಡದ ತಪ್ಪಲಿನಲ್ಲಿದೆ. ಈ ಮಠವು ಶ್ರೀ ಬೂದಿಬಸವೇಶ್ವರ ಸ್ವಾಮಿಗಳಿಂದ ಸ್ಥಾಪನೆಯಾಗಿದೆ. ಈ ಮಠದ ಶ್ರೀ ಬೂದಿಬಸವೇಶ್ವರರು ಜೀವಂತ ಸಮಾಧಿಯಾದ ಮೇಲೆ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬರುತ್ತಾರೆ. ಮಠದ ಪರಂಪರೆಯಲ್ಲಿ ಈಗಿನ ಗುರುಗಳು ಸೇರಿದಂತೆ ಒಟ್ಟು ೮ ಜನ ಗುರುಗಳ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದಾರೆಂದು ತಿಳಿದು ಬರುತ್ತದೆ. ಈ ಮಠದ ಪಟ್ಟಾಧಿಕಾರಿಗಳು ಈ ಮೇಲಿನ ಇಬ್ಬರು ಸ್ವಾಮಿಗಳ ಹೆಸರುಗಳನ್ನು ಅನುಕ್ರಮವಾಗಿ ಅಭಿದಾನ ಮಾಡಲಾಗುತ್ತಿರುವ ಕಾರಣಕ್ಕೆ ಈ ಮಠದ ಪರಂಪರೆಯಲ್ಲಿ ಇಬ್ಬರ ಹೆಸರುಗಳು ಮಾತ್ರ ತಿಳಿದು ಬರುತ್ತದೆ. ಈಗಿನವರು ಶ್ರೀ ಬೂದಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳಾಗಿದ್ದಾರೆ. ಇವರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

“ಶ್ರೀಬೂದಿಬಸವೇಶ್ವರ ಸ್ವಾಮಿಗಳ ಪ್ರಭಾವಕ್ಕೆ ಒಳಗಾಗಿದ್ದ ಹೈದರಾಬಾದ ನಿಜಾಂ ಮಠಕ್ಕೆ ನಲವತ್ತು ಎಕರೆ ಭೂಮಿಯನ್ನು ಉಂಬಳಿಯಾಗಿ ನೀಡಿದ್ದು, ಈ ಆಸ್ತಿ ಇಂದಿಗೂ ಮಠದ ಆದಾಯದ ಮೂಲವಾಗಿದೆ. ಪುರಾತನ ಈ ಮಠವು ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಿಗೆ ಹೆಚ್ಚು ಒತ್ತುಕೊಟ್ಟು ವೀರಶೈವ ಧರ್ಮ ಬೆಳೆಯಲು ನೆರವಾಗಿದೆ. ಈ ಭಾಗದ ಪ್ರಭಾವಿ ಮಠಗಳಲ್ಲಿ ಒಂದಾಗಿ ಬೆಳೆದಿದೆ”.[೩]

ಈ ಮಠದ ಅಭಿವೃದ್ಧಿಯು ದಿನದಿನಕ್ಕೆ ಹೆಚ್ಚುತ್ತಿದೆ. ಮಠದಲ್ಲಿ ಸ್ವಾಮಿಗಳು ಅನೇಕ ಧಾರ್ಮಿಕ ವಿಧಿ–ವಿಧಾನಗಳು, ಪೂಜೆಗಳನ್ನು, ಜಾತ್ರೆ, ಉತ್ಸವ, ಹಬ್ಬ ಹರಿದಿನ ಆಚರಿಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಮಹಾದಾಸೋಹದ ವ್ಯವಸ್ಥೆಯನ್ನು ಕೂಡ ಮಾಡಲಾಗುತ್ತದೆ.

**ಸಾವಿರ ದೇವರ ಮಠ**

ಶ್ರೀ ಸಾವಿರದೇವರ ಮಠವು ಗಬ್ಬೂರು ಗ್ರಾಮದ ಮುಖ್ಯ ರಸ್ತೆಯಲ್ಲಿದೆ. ಬಾಳೆಹೊನ್ನೂರು ರಂಭಾಪುರಿ ಪೀಠದ ಶಾಖಾ ಮಠವಾಗಿರುವ ಈ ಮಠವು ಈ ಗ್ರಾಮಕ್ಕೆ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಗುರುಗಳಾದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು, ಅನುಷ್ಠಾನ ಕೈಗೊಂಡಂತಹ ಸ್ಥಳಗಳಲ್ಲಿ ಮಠಗಳನ್ನು ಸ್ಥಾಪಿಸಿ ವೀರಶೈವ ಧರ್ಮ ಬೆಳೆಯಲು ನೆರವಾಗಿದ್ದಾರೆ. ಈ ಮಠದ ಪರಂಪರೆಯಲ್ಲಿ ನಾಲ್ಕುಜನ ಮಠದ ಪಟ್ಟಾಧಿಕಾರಿಗಳಾಗಿರುವದು ತಿಳಿದು ಬರುತ್ತದೆ. ಈಗಿನವರು ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಇವರು ನಾಲ್ಕನೆಯ ಪಟ್ಟಾಧಿಕಾರಿಗಳಾಗಿದ್ದಾರೆ. ಇವರು ಧಾರ್ಮಿಕ ಕಾರ್ಯದಲ್ಲಿ ಮಠದಲ್ಲಿ ಗದ್ದುಗೆಗಳು ಸ್ಥಾಪಿಸಿದ್ದಾರೆ. ನಿತ್ಯ ಅವುಗಳ ಪೂಜೆ, ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗುತ್ತಿದೆ. ಧಾರ್ಮಿಕ ಸಂಸ್ಕಾರವನ್ನು ನೀಡುತ್ತಾ ಬಂದಿದ್ದಾರೆ. ಅಷ್ಟೇ ಅಲ್ಲದೆ ಶೈಕ್ಷಣಿಕ ಸಾಮಾಜಿಕ ಕಾರ್ಯನಿರ್ವಹಿಸುತ್ತಿದ್ದಾರೆ. ಇದರಿಂದ ಮಠದ ಅಭಿವೃದ್ಧಿಯು ಕೂಡಾ ಕಂಡು ಬರುತ್ತದೆ.

**ಗೆಜ್ಜೆ ಬಾವಿ**

ದೇವದುರ್ಗ ತಾಲ್ಲೂಕಿನಲ್ಲಿ ಬರುವಂತಹ ಗೆಜ್ಜೆಬಾವಿ ಗ್ರಾಮವು ೮ ಕಿ.ಮೀ. ದೂರದಲ್ಲಿದೆ. ಈ ಊರಿನ ಮಧ್ಯಭಾಗದಲ್ಲಿರುವ ಚನ್ನಬಸವೇಶ್ವರ ಮಠವಾಗಿದೆ.

**ಚನ್ನಬಸವೇಶ್ವರ ಮಠ**

ಗೆಜ್ಜೆಬಾವಿ ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಪುರಾತನ ಕಾಲದಲ್ಲಿ ಶ್ರೀ ಚನ್ನಬಸವೇಶ್ವರ ಸ್ವಾಮಿಗಳು ಈ ಮಠವನ್ನು ಸ್ಥಾಪನೆ ಮಾಡಿರುವುದಕ್ಕೆ ಅವರ ಹೆಸರನಿಂದಲೇ ಮಠವನ್ನು ಕರೆಯುವ ಸಂಪ್ರದಾಯವಾಗಿದೆ. ಈ ಮಠದ ಪಂಪರೆಯಲ್ಲಿ ಈಗಿನವರು ಸೇರಿದಂತೆ ಒಟ್ಟು ಐದು ಜನ ಗುರುಗಳು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಈಗಿನವರು ಶ್ರೀಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಧಾರ್ಮಿಕ ಕಾರ್ಯವನ್ನು ಕೈಗೊಂಡು ಮಠವನ್ನು ಅಭಿವೃದ್ಧಿ ಪಡೆಸುತ್ತಿದ್ದಾರೆ.

**Golden Resrach Thoughts**
**Vol -1 , ISSUE –VII, Jan - 2012**
**ISSN No-2031-5063** Available online at www.grt.net

**ಜಾಲಹಳ್ಳಿ**

ದೇವದುರ್ಗ ತಾಲ್ಲೂಕಿನಲ್ಲಿ ಬರುವಂತಹ ಈ ಗ್ರಾಮದಲ್ಲಿ ಜಾಲಹಳ್ಳಿ ಗ್ರಾಮದ ಮಧ್ಯ ಭಾಗದಲ್ಲಿ ಶ್ರೀ ಜಯಶಾಂತಲಿಂಗೇಶ್ವರ ಮಹಾಸಂಸ್ಥಾನ ಬೃಹನ್ಮಠವು ಸ್ಥಾಪನೆಯಾಗಿ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಬೆಳೆದಿದೆ. ಈ ಮಠವು ಪುತ್ರ ವರ್ಗದ ಪರಂಪರೆಯಲ್ಲಿ ಬಂದಿದೆ. ಈ ಮಠವು ಶ್ರೀ ಜಗದಾರಾಧ್ಯ ವಿಶ್ವಮಾನ್ಯ ಪೂಜಾಭಿನವ ಮಲಯ ಜಯಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿತವಾಗಿದೆ. ಈ ಮಠದ ಈಗಿನವರು ಸೇರಿದಂತೆ ೩೬ ಗುರುಗಳು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಈಗಿನವರು ಶ್ರೀ ವಿದ್ಯಾನಂದರು ಮೂಲಹೆಸರು ಆಗಿದೆ. ಆದರೆ ಈ ಮಠದ ಗುರುಗಳ ಹೆಸರಿನ ಪರಂಪರೆಯಯೆನಂದರೆ ಅವರ ಹೆಸರನ್ನು ಶ್ರೀಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು ಎಂಬ ಹೆಸರನ್ನು ಕರೆಯುತ್ತಾರೆ.ಈ ಮಠದ ಪರಂಪರೆಯು ವಿಶಿಷ್ಟತೆಯಿಂದ ಕೂಡಿದೆ. ಈ ಮಠದ ಧಾರ್ಮಿಕ ಕಾರ್ಯವನ್ನು ಪರಂಪರಾನುಗತವಾಗಿ ನಡೆದು ಬಂದಿದೆ. ಈ ರೀತಿ ಧಾರ್ಮಿಕ, ಸಾಮಾಜಿಕ ಶೈಕ್ಷಣಿಕ ಹಾಗೂ ಸಾಹಿತ್ಯಿಕ ವಿಚಾರಗಳಿಗೆ ಗುರುಗಳೂ ಮಠವನ್ನು ನಡೆಸಿದ್ದಾರೆ.

**ದೇವದುರ್ಗ**

ರಾಯಚೂರು ಜಿಲ್ಲೆಯಿಂದ ದೇವದುರ್ಗ ಪಟ್ಟಣವು ನಲವತ್ತು ಕಿ.ಮೀ. ದೂರದಲ್ಲಿದೆ. ಈ ಪಟ್ಟಣದಲ್ಲಿ ಒಟ್ಟು ಇಪ್ಪತ್ತೊಂದು ಮಠಗಳು ಸ್ಥಾಪನೆಯಾಗಿದ್ದವು. ಈ ಮಠಗಳಲ್ಲಿ ಕೆಲವು ಕೋಟೆ ಒಳಗೆ ಇನ್ನೂ ಕೆಲವು ಮಠಗಳು ಹೊರಗೆ ಸ್ಥಾಪನೆಗೊಂಡಿದ್ದವು. ಈ ಮಠಗಳನ್ನು ಈಗ ಶಿಖರಮಠದಲ್ಲಿ ಮಾತ್ರ ಮಠಾಧೀಶರಿದ್ದು ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ. ಉಳಿದ ಮಠಗಳಲ್ಲಿ ಮಠಾಧೀಶರಿಲ್ಲದೆ ಗದ್ದುಗೆಯ ಪೂಜೆಯ ಸೀಮಿತಗೊಂಡಿವೆ.

**ಸಿದ್ಧರಾಮೇಶ್ವರ ಶಿಖರ ಮಠ**

"ದೇವದುರ್ಗದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಸಿದ್ಧರಾಮೇಶ್ವರ ಶಿಖರಮಠವು ೧೨ನೆಯ ಶತಮಾನಕ್ಕೂ ಪೂರ್ವದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಉಜ್ಜಯನಿ ಪೀಠದ ಶಾಖಾಮಠವಾದ ಈ ಮಠವು ಶಿಷ್ಯೆ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಈ ಮಠವು ಪರಂಪರೆಯ ಐದನೆಯ ಗುರುಗಳಾದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳಿಮದ ಹೆಚ್ಚು ಹೆಸರು ಪಡೆಯಿತು."[೪]

ಈ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಹೆಚ್ಚು ಪ್ರಸಿದ್ಧಿಯನ್ನು ಪಡೆಯಿತು. ಆದ ಕಾರಣ ಈ ಮಠಕ್ಕೆ "ಶ್ರೀ ಸಿದ್ಧರಾಮೇಶ್ವರ ಶಿಖರ ಮಠ"ವೆಂದು ಹೆಸರು ಬಂದಿದೆ.

**ಮಠದ ಪರಂಪರೆ**

೧. ಷ.ಬ್ರ.ಶ್ರೀ ಮೂಕಬಸವಲಿಂಗ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು
೬. ಷ.ಬ್ರ.ಶ್ರೀ ಗುರುಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು
೭. ಷ.ಬ್ರ.ಶ್ರೀ ನಾಗಭೂಷಣಲಿಂಗ ಶಿವಾಚಾರ್ಯ ಸ್ವಾಮಿಗಳು
೮. ಷ.ಬ್ರ.ಶ್ರೀ ಅನ್ನದಾನಲಿಂಗ ಶಿವಾಚಾರ್ಯ ಸ್ವಾಮಿಗಳು
೯. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು
೧೦. ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು
೧೧. ಷ.ಬ್ರ.ಶ್ರೀ ಕಪಿಲ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಮಠದ ಕರ್ತೃ ಗುರುಗಳಾಗಿ ಶ್ರೀ ಮೂಕಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿದ್ದಾರೆ. ಈಗಿನವರು ಸುರುಪುರ ತಾಲ್ಲೂಕಿನ ಹರಳಹಳ್ಳಿ ಗ್ರಾಮದವರು. ಶ್ರೀ ಕಪಿಲ ಸಿದ್ಧರಾಮ ಸ್ವಾಮಿಗಳು ಈ ಗುರುಗಳು ಪಟ್ಟಾಧಿಕಾರವನ್ನು ಪಡೆದಿದ್ದಾರೆ. ಇವರು ಪ್ರಗತಿಪರ ಚಿಂತಕರಾಗಿ, ಧರ್ಮವನ್ನು ವಾಸ್ತವಿಕ ನೆಲೆಗಟ್ಟಿನ ಮೇಲೆ ಬೆಳೆಸಬೇಕು ಎಂಬ ಹಂಬಲದಿಂದ ಕಾರ್ಯ ಪ್ರವೃತ್ತರಾಗಿದ್ದಾರೆ. ಇವರು ಧಾರ್ಮಿಕ ಕಾರ್ಯಗಳನ್ನು ಹಾಗೂ ಸಾಹಿತ್ಯಿಕ ಅಭಿವೃದ್ಧಿಯನ್ನು ಪಡೆಸಿದ್ದಾರೆ.

**ನೀಲಗಲ್ಲು**

ದೇವದುರ್ಗ ತಾಲೂಕಿನಿಂದ ನೀಲಗಲ್ಲು ಗ್ರಾಮವು ಮೂವತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಬೃಹನ್ಮಠವು ಅಸ್ತಿತ್ವದಲ್ಲಿದೆ.

**ಬೃಹನ್ಮಠ**

ನೀಲಗಲ್ಲು ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಬೃಹನ್ಮಠವು ಸ್ಥಾಪನೆಯಾಗಿದೆ. ಈ ಮಠದ ಸ್ಥಾಪನೆಯಿಂದ ಈ ಗ್ರಾಮದಲ್ಲಿ ಧಾರ್ಮಿಕ ಚಟುವಟಿಕೆಗಳು ಚುರುಕುಗೊಂಡ ಸಂಸ್ಕಾರ ಪಡೆದಿದೆ. ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಈ ಮಠವನ್ನು ಸುಮಾರು ೬೦೦ ವರ್ಷಗಳ ಹಿಂದೆ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ.

**ಪರಂಪರೆ**

೧. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನಮಲ್ಲ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಶಾಂತಮಲ್ಲ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಐದನೆಯ ಗುರುಗಳಾದ ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳು ಹದಿನಾರನೆಯ ವಯಸ್ಸಿನಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಇವರು ಸ್ನಾತಕೋತ್ತರ ಪದವಿಯನ್ನು ಮುಗಿಸಿ ವಿದ್ವತ್ ಪಾಂಡಿತ್ಯವನ್ನು ಗಳಿಸಿಕೊಂಡು ಮಠಕ್ಕೆ ಬಂದರು. ಇವರು ಧಾರ್ಮಿಕ ಕಾರ್ಯವನ್ನು ಕೂಡ ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ.

**ಮಸರಕಲ್ಲು**

ದೇವದುರ್ಗ ತಾಲ್ಲಕಿನಿಂದ ಮಸರಕಲ್ಲು ಗ್ರಾಮವು ೧೦ ಕಿ.ಮೀ ದೂರದಲ್ಲಿದೆ. ಇಲ್ಲಿಶ್ರೀ ಮುರುಘೇಂದ್ರಸ್ವಾಮಿ ಮಠವು ಅಸ್ತಿತ್ವದಲ್ಲಿದೆ.

**ಮುರುಘೇಂದ್ರ ಸ್ವಾಮಿಮಠ**

ಮಸರಕಲ್ಲು ಗ್ರಾಮದಲ್ಲಿ ವಿರಕ್ತ ಸಂಪ್ರದಾಯದ ಮುರುಘಾ ಸಮಯದ ಶ್ರೀ ಮರುಘೇಂದ್ರ ಸ್ವಾಮಿ ಮಠವು ಗ್ರಾಮದ ಹೊರಭಾಗದಲ್ಲಿ ಸ್ಥಾಪನೆ ಗೊಂಡಿದೆ.

**ಪರಂಪರೆ**

೧. ಶ್ರೀ.ಮ.ನಿ.ಪ್ರ ಮುರುಘೇಂದ್ರ ಸ್ವಾಮಿಗಳು
೨. ಶ್ರೀ.ಮ.ನಿ.ಪ್ರ ಮಹಾಲಿಂಗ ಸ್ವಾಮಿಗಳು
೩. ಶ್ರೀ.ಮ.ನಿ.ಪ್ರ ಬಸವಯ್ಯ ಸ್ವಾಮಿಗಳು
೪. ಶ್ರೀ.ಮ.ನಿ.ಪ್ರ ಮುರುಘೇಂದ್ರ ಸ್ವಾಮಿಗಳು

ಈ ಮಠದ ಪರಂಪರೆಯು ಈ ರೀತಿ ಬೆಳೆದು ಬಂದಿದೆ. ಈಗಿನವರು ಮುರುಘೇಂದ್ರ ಸ್ವಾಮಿಗಳು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದ್ದಾರೆ. ಇವರು ಧಾರ್ಮಿಕ ಕಾರ್ಯಗಳನ್ನು ನಡೆಸಿ ಮಠವನ್ನು ನಡೆಸುತ್ತಿದ್ದಾರೆ.

**ಅಡಿಟಿಪ್ಪಣಿ**

೧ ರಮೇಶ ಮೂಲಗೆ : ಬೀದರ ಜಿಲ್ಲೆಯ ವೀರಶೈವ ಮಠಗಳು. ಪು–೯
೨ ನಾರಾಯಣಪೂರ ಚಂದ್ರಶೇಖರ : ಕರ್ನಾಟಕ ವೀರಶೈವ ಮಠಗಳು. ಪು–೧೭
೩ ನಾರಾಯನಪೂರ ಚಂದ್ರಶೇಕರ : ಕರ್ನಾಟಕದ ವೀರಶೈವ ಮಠಗಳು. ಪು. ೧೧೨೫
೪ ನಾರಾಯನಪೂರ ಚಂದ್ರಶೇಕರ : ಕರ್ನಾಟಕದ ವೀರಶೈವ ಮಠಗಳು. ಪು. ೧೧೩೨



**ಶಿವಗಂಗಾ U. ಬಿಲಗುಂದಿ**
ಕನ್ನಡ ಅಧ್ಯಯನ ಸಂಸ್ಥೆ, **ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.**